# Kannada Language (CODE:015) (2017-18) Class. X
## SECTIONWISE DESIGN OF QUESTION PAPER

| Section | Type of Question | No. of Questions | No. of Marks per Question | Total Marks | Grand Total Marks |
|---|---|---|---|---|---|
| **A (Reading Comprehension)** | SAQ | **2** | **1** | **2** | |
| (Unseen Passage, Prose) | SAQ | **2** | **2** | **4** | **12** |
| (Unseen Poem) | SAQ | **2** | **1** | **2** | |
| | SAQ | **2** | **2** | **4** | |
| **B (Writing Comprehension)** | LAQ | **1** | **6** | **6** | |
| Essay | LAQ | **1** | **5** | **5** | |
| Official Letter/Job application | | | | | **15** |
| Report Writing | LAQ | **1** | **4** | **4** | |
| **C (Grammar)** | VSA | **14** | **½** | **7** | |
| | SA | **9** | **1** | **9** | **18** |
| | SA | **1** | **2** | **2** | |
| **D (Literature)** | | | | | |
| Prose | MCQ | **5** | **1** | **5** | |
| Poetry | MCQ | **5** | **1** | **5** | |
| Prose : (Question) | SAQ | **1** | **3** | **3** | |
| (Reference to Context) | SAQ | **1** | **3** | **3** | |
| Poetry : (Question) | SAQ | **1** | **3** | **3** | **35** |
| (Reference to Context) | SAQ | **1** | **3** | **3** | |
| Prose | LAQ | **1** | **4** | **4** | |
| Poetry | LAQ | **1** | **4** | **4** | |
| **Nondetail** (Pathya Poshaka adhyayana) | SA | **5** | **1** | **5** | |
| | **Total** | **56** | | | **80** |

## Kannada Language (CODE:015) (2017-18) Class. X
## OVERALL DETAILED DESIGN OF THE QUESTION PAPER

| Type of Question | No. of Questions | No. of Marks Per Question | Total Marks |
|---|---|---|---|
| SAQ | 14 (Grammar) | ½ | 7 |
| SAQ | 18 - 9(grammar)<br>4(comprehension)<br>5 (non-detail) | 1 | 18 |
| MCQ | 10- 5(prose)<br>5(poetry) | 1 | 10 |
| SAQ | 5 - 4(comprehension)<br>1(proverb) | 2 | 10 |
| SAQ | 4 - 2 questions<br>- ( 1 prose, 1poetry)<br>- 2 ref. to context<br>- (1 prose, 1poetry) | 3 | 12 |
| LAQ | 3 - 1 (report writing)<br>- 1 (prose)<br>- 1 (poetry) | 4 | 12 |
| LAQ | 1 (off. Letter job. App)<br>1 (essay | 5<br>6 | 5<br>6 |
| | 56 | | 80 |

# KANNADA LANGUAGE (CODE : 015)

# Class – IX and X (2017-18)

**Time : 3 Hrs.** **Total : 80 Marks** **No. of periods**

The Questio Paper will be divided into four sections :

| | | | |
|---|---|---|---|
| Section A | Reading Comprehension | 12 Marks | 30Pds |
| Section B | Writing | 15 Marks | 40 Pds |
| Section C | Grammar | 18 Marks | 42 Pds |
| Section D | Literature | 35 Marks | 80 Pds |

## Design of Question Paper

| Sl. No. | Type of Questions | No. of Questions | No. of Marks Per Question | Total No. of Marks |
|---|---|---|---|---|
| 1 | VSA | 14 | 1/2 | 07 |
| 2 | MCQ | 10 | 01 | 10 |
| 3 | SAQ | 18 | 01 | 18 |
| 4 | SAQ | 05 | 02 | 10 |
| 5 | SAQ | 04 | 03 | 12 |
| 6 | LAQ | 03 | 04 | 12 |
| 7 | LAQ | 01 | 05 | 05 |
| 8 | LAQ | 01 | 06 | 06 |
| | | 56 | | **80** |

# KANNADA CODE: 015

# 2017 – 18

# SAMPLE QUESTION PAPER

## SUBJECT : KANNADA CLASS : X

**ಅನುಮತಿಸಲಾದ ಸಮಯ : ೩ಗಂಟೆ** **ಗರಿಷ್ಠ ಅಂಕಗಳು : ೮೦**

Time allowed : 3 hours. Maximum Marks : 80

**ಸೂಚನೆಗಳು : ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.**

| | |
|---|---|
| **ವಿಭಾಗ – A (ವಾಚನ ಮತ್ತು ಗ್ರಹಿಕಾ ಕೌಶಲ)** | **: 12 ಅಂಕಗಳು** |
| **ವಿಭಾಗ – B (ಬರವಣಿಗೆ ಕೌಶಲ)** | **: 15 ಅಂಕಗಳು** |
| **ವಿಭಾಗ – C (ಅನ್ವಯಿಕ ವ್ಯಾಕರಣ)** | **: 18 ಅಂಕಗಳು** |
| **ವಿಭಾಗ – D (ಪಠ್ಯಗಳ ಅಧ್ಯಯನ)** | **: 35 ಅಂಕಗಳು** |

## A – (Reading Section) : 12 Marks

### ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**ಪ್ರಶ್ನೆ 1. 1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ**

ಮಾನವ ಬದುಕಲು ಗಾಳಿ, ಬೆಳಕು, ನೀರು ಅತಿ ಅಗತ್ಯವಾದರೂ ಕೂಡ ಅವನ್ನು ಕಾಪಾಡಿಕೊಳ್ಳುವುದೂ ಕೂಡ ಅಷ್ಟೇ ಅಗತ್ಯವಾಗಿದೆ. ಅನಗತ್ಯವಾಗಿ ಮಾನವ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾನೆ. ಅವುಗಳ ಕೊಳಕನ್ನು ನದಿಗೋ, ಕೆರೆಗೋ, ಹಳ್ಳಕ್ಕೋ ಹರಿಬಿಡುತ್ತಾನೆ. ಕಾರ್ಖಾನೆಗಳ ಹೊಗೆಯಿಂದ ವಾಯುಮಾಲಿನ್ಯ ಉಂಟಾದರೆ, ಅದರ ಕೊಳಚೆ ನೀರು ನದಿಯನ್ನು ಸೇರಿ ಜಲಮಾಲಿನ್ಯವುಂಟಾಗುತ್ತಿದೆ. ನೀರನ್ನು ಭೂಮಿಯ ಮೇಲಿನ ಅಮೃತ, ಜೀವಜಲ ಎಂದು ಕರೆಯುತ್ತಾರೆ. ಆದರೆ ಅದನ್ನು ನಾವು ಅಗತ್ಯಕ್ಕಿಂತ ಹೆಚ್ಚು ಬಳಸುತ್ತೇವೆ. ಕೆಲವೊಮ್ಮೆ ನಲ್ಲಿಗಳನ್ನು ಹಾಗೆಯೇ ತೆರೆದಿಟ್ಟು ಹೋಗಿಬಿಡುತ್ತೇವೆ. ಇದರಿಂದ ಅಪಾರ ನೀರು ನಷ್ಟವಾಗುತ್ತದೆ. ಕಾಡಿನ ನಾಶದಿಂದಾಗಿ ಈಗೀಗ ಮಳೆಯೂ ಕಡಿಮೆಯಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ಹನಿ ನೀರಿಗೂ ಪರದಾಡಬೇಕಾಗುತ್ತದೆ. ಆದ್ದರಿಂದ ಒಂದೊಂದು ಹನಿ ನೀರನ್ನೂ ಕಾಪಾಡಬೇಕು. ನೀರನ್ನು ವ್ಯರ್ಥವಾಗಿ ಪೋಲು ಮಾಡಬಾರದು. ಜಲಸಂರಕ್ಷಣೆ ಪ್ರತಿಯೊಬ್ಬರ ಆದ್ಯಕರ್ತವ್ಯ ಎಂಬುದನ್ನು ಅರಿತುಕೊಳ್ಳಬೇಕು. ನೀರು ಪೋಲಾಗುವುದನ್ನು ತಡೆಗಟ್ಟಲು ಪ್ರತಿಯೊಬ್ಬರೂ ಮುಂದಾದರೆ ನಮ್ಮ ನೀರಿನ ಸಮಸ್ಯೆಯನ್ನು ನಾವು ಬಗೆಹರಿಸಿಕೊಳ್ಳಬಹುದು. ಹಾಗಾಗಿ ಎಲ್ಲರೂ ಆ ದಿಸೆಯಲ್ಲಿ ಪ್ರಯತ್ನಶೀಲರಾಗಬೇಕು.

**ಪ್ರಶ್ನೆಗಳು:**

1) ಅಂತರ್ಜಲ ಕಡಿಮೆಯಾಗಲು ಕಾರಣವೇನು? **1**
2) ಮಾನವ ಬದುಕಿಗೆ ಯಾವುದು ಅಗತ್ಯವಾಗಿದೆ? **1**
3) ಜಲಮಾಲಿನ್ಯ ಮತ್ತು ವಾಯುಮಾಲಿನ್ಯಗಳಿಗೆ ಕಾರಣವೇನು? **2**
4) ಜಲಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಬಗೆ ಹೇಗೆ? **2**

**2. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಜಿಪುಣ ಅಂದ್ರೆ ಜಿಪುಣ ಈ ಕಾಲ
ಏನೇ ಗಿರವಿ ಇಟ್ರೂ
ಎಷ್ಟೇ ಬಡ್ಡಿ ಕೊಟ್ರೂ
ಹುಟ್ಟೋದಿಲ್ಲ ಒಂದು ಗಳಿಗೆ ಸಾಲ.

ಅಮ್ಮ ಯಾರೋ ಅಪ್ಪ ಯಾರೋ ಕಾಣೆ
ಸಿಕ್ಕರೂ ಅಣುವಿನ ಗುಟ್ಟು
ಪ್ರಕೃತಿಯ ಬಗೆಬಗೆ ಪಟ್ಟು
ಸಿಕ್ತಾ ಇಲ್ಲ ಈ ಮಹಾರಾಯನ ಮೂಲ.

ಒಂದೇ ಎರಡೆ ಹನ್ನೆರಡು ಕಣ್ಣು
ಇಕ್ಕೋದಿಲ್ಲ ಎವೆ
ಮಿರಿಮಿರಿ ಮಿರುಗುತ್ತಾವೆ
ದಿಟ್ಟಿಸುತ್ತ ಇಡೀ ಸೃಷ್ಟಿ ಜಾಲ.

ವಂಧಿಮಾಗಧರು ಇವನಿಗೆ ಸೂರ್ಯಚಂದ್ರ
ಬೇರೆ ಗ್ರಹತಾರೆ
ಅವ್ರೂ ಕುಣೀತಾರೆ
ಹಿನ್ನೆಲೆಗುಂಟು ವಿಶ್ವದ ವಾದ್ಯ ಮೇಳ.

ಈ ಕಬಂಧನಿಗೆ ಎಂದೂ ತುಂಬದ ಹೊಟ್ಟೆ
ದಿಗಂತ ಕೈಗಳ ಚಾಚಿ
ಸಿಕ್ಕಿದ್ದೆಲ್ಲ ಬಾಚಿ
ನುಂಗಿ ಜೀರ್ಣಿಸಿಕೊಳ್ಳುತ್ತಾನೆ ಮನೆಹಾಳ.

ದೇವರ ಮರೆತರೂ ಈತನ ಮರೆಯೋದುಂಟೆ?
ಗಂಟೆ ಬಡಿಯುತ್ತಾನೆ
ಕನ್ನಡಿ ಹಿಡಿಯುತ್ತಾನೆ
ಕಾಡುತ್ತಾನೆ ಬೆನ್ನು ಹತ್ತಿ ಬೇತಾಳ.

ಹಾಡೋದೇನು ಈ ತ್ರಿವಿಕ್ರಮನ ಮಹಿಮೆ?
ಎಲ್ಲರ ನೆತ್ತಿಯ ಮೇಲೂ
ಈತನ ಪಾದದ ನೆರಳು
ದಕ್ಕುವುದಿಷ್ಟೇ ಇತಿಹಾಸದ ಪಾತಾಳ.

ಮೀರುವುದೊಂದೇ ಈತನ ಗೆಲ್ಲಲು ದಾರಿ
ಸಿಕ್ಕದೆ ರೂಢಿಯ ಕೈಲಿ
ಕಲ್ಪಿಸಿ ಹೊಸ ಶೈಲಿ
ಧಿಕ್ಕರಿಸೋಣ ಲೆಕ್ಕಾಚಾರದ ತಾಳ.

**ಪ್ರಶ್ನೆಗಳು :–**

1) ಜಿಪುಣ ಯಾರು? **1**

**2)** ಜಿಪುಣನಿಗೆ ವಂದಿಮಾಗಧರು ಯಾರು? **1**

3) ಯಾರನ್ನು ಮರೆಯಲಾಗುವುದಿಲ್ಲ? ಏಕೆ? **2**

4) ಕಾಲನನ್ನು ಏಕೆ ಮನೆಹಾಳ ಎಂದು ಕರೆಯಲಾಗಿದೆ? **2**

## B – (Writing Section) : 15 Marks

### ವಿಭಾಗ – ಬಿ (ಬರವಣಿಗೆಯ ಕೌಶಲ) : 15 ಅಂಕಗಳು

**ಪ್ರಶ್ನೆ ೨. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **6**

1. ಭಯೋತ್ಪಾದನೆ
2. ರಾಷ್ಟ್ರೀಯ ಭಾವೈಕ್ಯತೆ
3. ಕ್ರೀಡೆಗಳ ಮಹತ್ವ

**ಪ್ರಶ್ನೆ ೩.** ಕರ್ನಾಟಕ ಬ್ಯಾಂಕಿನಲ್ಲಿ ಖಾಲಿ ಇರುವ ವ್ಯವಸ್ಥಾಪಕರ ಹುದ್ದೆಗೆ ನೇಮಕಾತಿ ಕೋರಿ ಅಧ್ಯಕ್ಷರು, ಕರ್ನಾಟಕ ಬ್ಯಾಂಕ್, ಬಸವನ ಬೀದಿ, ಬೆಂಗಳೂರು ಇವರಿಗೆ ಒಂದು ಅರ್ಜಿ ಸಲ್ಲಿಸಿರಿ.

**ಅಥವಾ**

ನೀವು ವಾಸಿಸುತ್ತಿರುವ ಪ್ರದೇಶದಲ್ಲಿ ಕಸದ ಸಮಸ್ಯೆಯಿದೆ. ಅದನ್ನು ಪರಿಹರಿಸಿ ಪರಿಸರ ಸ್ವಚ್ಛತೆ ಕಾಪಾಡುವಂತೆ ಕೋರಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ/ನಗರಪಾಲಿಕೆ ಇವರಿಗೆ ಒಂದು ಮನವಿಪತ್ರ ಬರೆಯಿರಿ. **5**

**ಪ್ರಶ್ನೆ 4.** ನಿಮ್ಮ ಪ್ರದೇಶದಲ್ಲಿ ವಿಪರೀತ ಮಳೆಯಿಂದ ಉಂಟಾದ ಪರಿಸ್ಥಿತಿಯನ್ನು ವಿವರಿಸಿ ಒಂದು ವರದಿ ತಯಾರಿಸಿ. **4**

## C – (Grammar) : 18 Marks

### ವಿಭಾಗ – ಸಿ (ಅನ್ವಯಿಕ ವ್ಯಾಕರಣ) : 18 ಅಂಕಗಳು

**ಪ್ರಶ್ನೆ ೫. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.**

**1.** ಈ ಪದಗಳಿಗೆ ತತ್ಸಮ/ತದ್ಭವಗಳನ್ನು ಬರೆಯಿರಿ : ಹಬ್ಬ, ಪ್ರಸಾದ. **1**

**2.** ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : ಸೂರ್ಯ, ನೆತ್ತರು. **1**

**3.** ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ : ಸ್ವರ್ಗ, ನಂಬಿಕೆ. **1**

**4.** ಈ ಪದಗಳ ಗ್ರಾಂಥಿಕ ರೂಪ ಬರೆಯಿರಿ : ಮ್ಯಾಗ, ಕೊಡುತಿವಿ. **1**

**5.** ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ : ಮುನಿ, ಹರಿ. **1**

**6.** ಈ ಪದಗಳ ವಿಭಕ್ತಿ ಪ್ರತ್ಯಯ ಬರೆಯಿರಿ : ಕಲಹಮಂ, ರಾಮನಿಗೆ . **1**

**7.** ಇವುಗಳಲ್ಲಿ ದ್ವಿರುಕ್ತಿ ಮತ್ತು ಜೋಡುನುಡಿಗಳನ್ನು ಗುರುತಿಸಿ ಬರೆಯಿರಿ : ಕೆನೆಮೊಸರು, ದೊಡ್ಡದೊಡ್ಡ. **1**

**8.** 'ರವಿ ಶಾಲೆಗೆ ಹೋದನು' ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ ಬರೆಯಿರಿ. **1**

**9.** 'ಭೀಮನು ಅನ್ನವನ್ನು ಉಂಡನು' ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿರಿ. **1**

**10.** 'ಮಕ್ಕಳು ಶಾಲೆಗೆ ಹೋಗುತ್ತಾರೆ' ಈ ವಾಕ್ಯವನ್ನು ನಿಷೇಧಾರ್ಥಕ ವಾಕ್ಯವನ್ನಾಗಿ ಬದಲಿಸಿ ಬರೆಯಿರಿ. **1**

**11.** ಈ ನುಡಿಗಟ್ಟನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ : ಹರಿಕಾರ, ಕಸರತ್ತು. **2**

**12.** ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ : ಮಹರ್ಷಿ, ನೆತ್ತರೊಂದೆ. **2**

**13.** ಈ ಪದಗಳನ್ನು ವಿಗ್ರಹಿಸಿ, ಸಮಾಸದ ಹೆಸರು ತಿಳಿಸಿ : ಅಂಗೈ, ಸೊಲ್ಗೇಳಿ. **2**

**14.** ಇವುಗಳಲ್ಲಿ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **2**

ಅ) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

ಆ) ಮಳೆಗೆ ಹೆದರಿ ಹೊಳೆಗೆ ಹಾರಿದರು.

# D – Literature Section : (Text – Part 1 – Prose and Poetry) : 35 Marks

## ವಿಭಾಗ – ಡಿ (ಪದ್ಯಗಳ ಅಧ್ಯಯನ) : 35 ಅಂಕಗಳು

**ಪ್ರಶ್ನೆ 6. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **10**

1. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ------
   (ದಶರಥ, ದನು, ವಾಲ್ಮೀಕಿ, ನಾರದ)
2. ದುರ್ಯೋಧನನು ಪಾಂಡವರಿಗಾಗಿ ಕಟ್ಟಿದ ಮನೆ ----
   (ಮಣ್ಣಿನ ಮನೆ, ಇಟ್ಟಿಗೆ ಮನೆ, ಅರಗಿನ ಮನೆ, ಕಲ್ಲಿನ ಮನೆ)
3. ದೇವನೂರರಿಗೆ ಮನೆಮಂಚಮ್ಮನ ಕಥೆಯನ್ನು ಹೇಳಿದವರು -----
   (ಸಿದ್ಧಲಿಂಗಯ್ಯ, ಅಶೋಕ ಪೈ, ಕುವೆಂಪು, ಗೊರೂರು)
4. ಗೃಹಸ್ಥಾಶ್ರಮ ಧನ್ಯ ಎಂದು ಹೇಳಿದವರು ----
   (ದ. ರಾ. ಬೇಂದ್ರೆ, ಅರಣ್ಯಕ, ವಿ. ಕೃ. ಗೋಕಾಕ್, ಪು. ತಿ. ನರಸಿಂಹಾಚಾರ್)
5. ಪಂಪಭಾರತಕ್ಕಿರುವ ಇನ್ನೊಂದು ಹೆಸರು ----
   (ಸಾಹಸಭೀಮ ವಿಜಯ, ವಿಕ್ರಮಾರ್ಜುನ ವಿಜಯ, ಕರ್ಣಾಟ ಭಾರತ ಕಥಾಮಂಜರಿ, ಜಯವಿಜಯ)
6. ದ. ರಾ. ಬೇಂದ್ರೆಯವರ ಕಾವ್ಯನಾಮ ----
   (ಶ್ರೀನಿವಾಸ, ಅಂಬಿಕಾತನಯದತ್ತ, ಉಯ್ಯಾಲೆ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ)
7. ಹಲಗಲಿ ಗ್ರಾಮ ಇರುವ ಜಿಲ್ಲೆ ----
   (ರಾಯಚೂರು, ಧಾರವಾಡ, ಬಾಗಲಕೋಟೆ, ಬೆಳಗಾವಿ)
8. ಬೃಹಸ್ಪತಿ ವಾರ ಎಂದರೆ ----
   (ಸೋಮವಾರ, ಗುರುವಾರ, ಶುಕ್ರವಾರ, ರವಿವಾರ)
9. ಇವರನ್ನು 'ಘಟಸಂಭೂತ' ಎನ್ನುತ್ತಾರೆ.----------
   (ಭೀಷ್ಮ, ದ್ರೋಣ, ಅಶ್ವತ್ಥಾಮ, ಕರ್ಣ)
10. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಹೀಗೆನಿಸುತ್ತದೆ ----------
    (ಹಳ್ಳಿ, ಪಟ್ಟಣ, ಸ್ಮಶಾನ, ಮಾರುಕಟ್ಟೆ)

**ಪ್ರಶ್ನೆ 7. ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** **3 X4=12**

1. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು?
2. ''ಈತನ ಮಾತು ಅಶ್ರುತಪೂರ್ವಮ್'' ಈ ಮಾತನ್ನು ಸಂದರ್ಭಸಹಿತ ವಿವರಿಸಿರಿ.

   **ಅಥವಾ**

   ''ನಾನು ಮುಖ ಮೇಲಾಗಿ ಬಿದ್ದಿದ್ದೆನೆ?'' ಈ ಮಾತಿನ ಸಂದರ್ಭಸ್ವಾರಸ್ಯ ವಿವರಿಸಿ.
3. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
4. "ಜಾನಕಿಯ ಮಗನಿದಕೆ ಬೆದರುವನೆ?" ಈ ಮಾತನ್ನು ಸಂದರ್ಭಸಹಿತ ವಿವರಿಸಿ.

   **ಅಥವಾ**

   "ಗೆರೆ ಎಳೆದು ಗಡಿ ಎಂದ" ಈ ಮಾತಿನ ಸಂದರ್ಭಸ್ವಾರಸ್ಯ ವಿವರಿಸಿ.

**ಪ್ರಶ್ನೆ 8. ಈ ಕೆಳಗಿನ ಪ್ರಶ್ನೆಗಳಿಗೆ 7-8 ವಾಕ್ಯಗಳಲ್ಲಿ ಉತ್ತರಿಸಿರಿ.** **4 X2=8**

1. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿರಿ.

   **ಅಥವಾ**

   ಬುಕ್ಕರಾಯನು ತನ್ನ ಆಳ್ವಿಕೆಯಲ್ಲಿ ಧರ್ಮಸಮದೃಷ್ಟಿಯನ್ನು ಹೇಗೆ ಆಚರಣೆಗೆ ತಂದನು? ವಿವರಿಸಿ.
2. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

   **ಅಥವಾ**

   ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

## Part 2 : Nondetailed : (5 Masrks)

### (ಪಠ್ಯ ಪೋಷಕ ಅಧ್ಯಯನ )

**ಪ್ರಶ್ನೆ 9. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ.** **1X5 =5**

1. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?
2. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
3. ಜೋಡಿ ಪಾರಿವಾಳಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?
4. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?
5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

**********************